# ಡಿ ಬಾಸ್ ದಾರಿ–ಮಾದರಿ



**ಕ**ನ್ನಡ ಚಿತ್ರರಂಗದ ಸ್ಟಾರ್ ನಟ, ಅಭಿಮಾನಿಗಳ ಪಾಲಿಗೆ ಡಿ ಬಾಸ್, ಹಿಂಬಾಲಕರ ಪಾಲಿಗೆ ಅಣ್ಣ, ಸರ್ಕಾರದ ಪಾಲಿಗೆ ಕೃಷಿ ಇಲಾಖೆಯ ರಾಯಭಾರಿ, ಹೀಗೆ ಬಹುರೂಪಿಯಾದ ದರ್ಶನ್ ಅವರು ಕೋಪದಿಂದ ಕೆಂಡಮಂಡಲವಾದಾಗಲೆಲ್ಲ ಕನ್ನಡ ಶ್ರೀಮಂತವಾಗುತ್ತದೆ. 'ಅದು ಹೇಗೆ?'

ಈಗ ಭಗಭಗ ಉರಿಯುತ್ತಿರುವ, ದರ್ಶನ್ ಅವರಿಗೆ ಸಂಬಂಧಿಸಿದ 25 ಕೋಟಿ ರೂಪಾಯಿ ವಿವಾದವನ್ನೇ ನೆನಪಿಸಿಕೊಳ್ಳಿ. ಮೈಸೂರಿನಲ್ಲಿನ ತಮ್ಮ ಫಾರ್ಮ್‌ಹೌಸ್ ಹೊರಗೆ ಹಸಿಹಸಿದು ಕಾಯುತ್ತಿದ್ದ ಮಾಧ್ಯಮದವರನ್ನು, ಸುರಿವ ಮಳೆಯಲ್ಲಿ ಕೊನೆಗೂ ಅರ್ಧಗೇಟು ತೆರೆದು ಒಳಬಿಟ್ಟುಕೊಂಡ ದರ್ಶನ್ ನಂತರ ಸ್ಫೋಟಗೊಂಡಿದ್ದು ಗೊತ್ತಿದೆಯಲ್ಲ. ಅಲ್ಲಿ ಅವರು ನಿರ್ದೇಶಕ ಪ್ರೇಮ್ ಅವರಿಗೆ ಬಳಸಿದ ಒಂದು ಪದ 'ಪುಡುಂಗು'. ಬಹುತೇಕ ಕನ್ನಡಿಗರಿಗೆ ಅಪರಿಚಿತವಾಗಿದ್ದ ಈ ಪದವು ಗ್ರ್ಯಾಂಡ್ ಓಪನಿಂಗ್‌ನೊಂದಿಗೆ ಕನ್ನಡ ಪದಪ್ರಪಂಚವನ್ನು ಸೇರಿಕೊಂಡಿದೆ. ಹಿಂದೆಯೂ ಹೀಗೆ ಡಿ ಬಾಸ್ ಕೋಪದ ಕೆ.ಆರ್.ಎಸ್. ಬಿರುಕು ಬಿಟ್ಟಾಗ ಹಲವು ಅಪರೂಪದ ಅಥವಾ ಅಪರಿಚಿತವೇ ಆಗಿರುವ ಶಬ್ದಗಳು ಸಿಡಿದುಬಂದಿದ್ದಿದೆ. ಹಾಗಾಗಿ ದರ್ಶನ್ ಜೀವಮಾನದ ಸಾಧನೆಯನ್ನು ಗುರ್ತಿಸುವಾಗ, ಕನ್ನಡಕ್ಕೆ ಅವರ ಕೊಡುಗೆ ಏನು ಎಂಬ ಪ್ರಶ್ನೆ ಬಂದಾಗ ಭಾಷಾಕೋಶಕ್ಕೆ ಸೇರ್ಪಡೆಯಾದ ಈ ಅಪೂರ್ವ ಶಬ್ದಗಳನ್ನು ಮರೆಯುವಂತಿಲ್ಲ.

'ಅಭಿಮಾನಿ ದೇವರು' ಎಂಬ ನುಡಿಗಟ್ಟನ್ನು ಹುಟ್ಟುಹಾಕಿ ಕನ್ನಡಿಗರ ಮನಸಲ್ಲಿ ದೇವರೇ ಆಗಿಹೋದ ರಾಜ್‌ಕುಮಾರ್ ಅವರು ನಡೆದಾಡಿದ ನೆಲದಲ್ಲಿ ಫ್ಯಾನ್ಸ್‌ಗಳಿಗೆ 'ಸೆಲೆಬ್ರಿಟಿಗಳು' ಎಂದು ಪಟ್ಟ ಕಟ್ಟಿದ ಶ್ರೇಯಸ್ಸೂ ದರ್ಶನ್ ಅವರಿಗೇ ಸಲ್ಲುತ್ತದೆ. ಫಾರ್ಮ್‌ಹೌಸಿನ ಪತ್ರಿಕಾಗೋಷ್ಠಿ ಅವರ ಸೆಲೆಬ್ರಿಟಿಗಳಿಗೆ ಅವರು ಕಟ್ಟಿಕೊಡುತ್ತಿರುವ ಸತ್'ಮಾದರಿ'ಯ ಪ್ರತೀಕವಾಗಿಯೂ ನೋಡಬೇಕು. ವಿಷಯವನ್ನು ಹೇಳುವುದಕ್ಕಿಂತ ಪತ್ರಕರ್ತರನ್ನು ತಮ್ಮ ಹಿಂದೆ ಅಲೆಸುವುದು, ಅವರಿಗೆ ತಮ್ಮ 'ಆಸ್ತಿ ದರ್ಶನ' ಮಾಡಿಸುವುದೇ ಅವರ ಉದ್ದೇಶವಾದಂತಿತ್ತು. ಒಂದು ದುಬಾರಿ ಕಾರನ್ನು ತೋರಿಸುತ್ತ, 'ಇದನ್ನು ಅಪ್ಪು ಬಿಟ್ರೆ ನಾನಷ್ಟೇ ಇಟ್ಕೊಂಡಿರೋದು, ನನ್ನ ತೋಟದ ಮನೆಯಲ್ಲಿ ಇಷ್ಟು ಪ್ರಾಣಿ ಸಾಕಿದೀನಿ, ಗೋಡೆಯ ಮೇಲೆ ಇರೋದು ಸ್ಟಫ್ ಅಲ್ಲ...' ಹೀಗೆ ಸಾಗುತ್ತಲೇ ಇದ್ದ ಅವರು, ಒಬ್ಬ ನಟನಲ್ಲಿ ಪ್ರತಿಭೆ, ವಿನಯಕ್ಕಿಂತಲೂ ಬೇರೇನೋ ಮುಖ್ಯ ಎಂಬುದನ್ನು ಸಹೃದಯರಿಗೆ ಸೂಚಿಸಲು ಹೊರಟಂತಿತ್ತು.

'ಗೋಷ್ಠಿ'ಯಲ್ಲಿ ಅವರು ಮಾಧ್ಯಮದವರನ್ನು ಸಂಬೋಧಿಸಿದ ರೀತಿಯೂ ಹೊಸ ಮಾದರಿಯೇ. ಮುಖದ ಮೇಲೆ ನೋವನ್ನು ತುಸುವೂ ತೋರಿಸಿಕೊಳ್ಳದೆ ಪದೇ ಪದೇ ಕೂದಲನ್ನು ಕಿತ್ತು ನೆಲಕ್ಕೆ ಚೆಲ್ಲುತ್ತಿದ್ದುದು ತ್ಯಾಗ ಸಹನೆಯ ಪ್ರತೀಕವಲ್ಲದೇ ಇನ್ನೇನು? ಪಕ್ಕದ ಹಿಂಬಾಲಕನ ತಲೆಗೆ ಮೊಟಕಿ, 'ಹೌದು, ಹೀಗ್ ಹೊಡಿತೀನಿ... ಇವ್ನೇನ್ ಪೊಲೀಸ್ ಕಂಪ್ಲೇಂಟ್ ಕೊಡ್ತಾನಾ? ನಾನ್ ಹೊಡ್ದು ಪ್ರಾಣ ಹೋಗಿದ್ರೆ, ರಕ್ತ ಚೆಲ್ಲಾಡಿದ್ರೆ, ಮೆಡಿಕಲ್ ರಿಪೋರ್ಟ್ ಆಗಿದ್ರೆ ಅದೊಂದು ಲೆಕ್ಕ...' ಎಂದು ಪ್ರಾತ್ಯಕ್ಷಿಕೆಯ ಮೂಲಕವೇ ತೋರಿಸಿದ್ದರ ಹಿಂದೆ ಏನೆಲ್ಲ ಸೂಚನೆಗಳಿರಬಹುದು ಎನ್ನುವುದು ಚಿತ್ರರಸಿಕರ ಊಹೆಗೆ ಬಿಟ್ಟಿದ್ದು.

ಗೋಷ್ಠಿಯೆಂಬ ಬೃಹನ್ನಾಟಕದ ಯಶಸ್ಸಿಗೆ ಮತ್ತೊಂದು ತುದಿಗಿದ್ದ ಮಾಧ್ಯಮಮಿತ್ರರ ಕೊಡುಗೆಯೂ ಕಮ್ಮಿಯೇನಿಲ್ಲ. ನಾಯಕನಟನ ಅತ್ಯದ್ಭುತ ವಾಗ್ವೈಖರಿಗೆ ಮರುಳಾದಂತಿದ್ದ ಅವರು, ಕರೆದಲ್ಲಿ ನಡೆದು, ಮುಟ್ಟೆಂದಿದ್ದನ್ನು ಮುಟ್ಟಿ, ಮುಂದೆ ಬಾ ಎಂದರೆ ಬಂದು, ಹಿಂದೆ ಹೋಗು ಎಂದಾಗ ಹೋದುದನ್ನು ನೋಡಿದರೆ ಅಭಿಮಾನಿಗಳೇ ಮಾಧ್ಯಮದ ವೇಷ ತೊಟ್ಟಂತೆ ಕಾಣುತ್ತಿತ್ತು. ಈ ಅಭಿಮಾನಿಸಮೂಹದಲ್ಲಿ ತೂರಿಕೊಂಡಂತಿದ್ದ ಓರ್ವ ಪತ್ರಕರ್ತ ಪ್ರಶ್ನೆ ಕೇಳಿದ ತಕ್ಷಣ, ದರ್ಶನ್ ಹಿಂದಕ್ಕೆ ತಿರುಗಿ, 'ನೋಡ್ಕೊಂಡ್ರೇನೋ' ಎಂದು ಕೇಳಿದ್ದಂತೂ ಥೇಟ್ ಸಿನಿಮಾ ಡೈಲಾಗಿನಂತೆಯೇ ಇತ್ತು.

ಇಡೀ ಪತ್ರಿಕಾಗೋಷ್ಠಿ, ಒಂದೆಡೆ ಕನ್ನಡದ ತಾರಾನಟನ ಅತ್ಯುಜ್ವಲ ವ್ಯಕ್ತಿತ್ವವನ್ನೂ, ಮಾಧ್ಯಮಗಳ ನೈತಿಕಪ್ರಭೆಯನ್ನೂ ಒಟ್ಟೊಟ್ಟಿಗೇ ಕಾಣಿಸಿದ್ದು ಕನ್ನಡಿಗರ ಪೂರ್ವಜನ್ಮದ ಸುಕೃತವಲ್ಲದೆ ಇನ್ನೇನು? ಹೇಳಿ ಕೇಳಿ ಡಿ ಬಾಸ್ 'ಮಾಸ್ ಸ್ಟಾರ್'. ಆಟ ಈಗಷ್ಟೇ ಶುರುವಾಗಿದೆ. ಸೋಷಿಯಲ್ ಮೀಡಿಯಾದಲ್ಲಿ ಸಂಸದರು, ನಟರುಗಳೆಲ್ಲ ಚಾಲೆಂಜಿಂಗ್ ಸ್ಟಾರ್ ಬೆಂಬಲಕ್ಕೆ ಟೊಂಕ ಕಟ್ಟಿದ್ದಾರೆ. ಮುಂದಿನ ಕೌಟುಂಬಿಕ ಚಿತ್ರ ಕಣ್ತುಂಬಿಕೊಳ್ಳುವ ಭಾಗ್ಯ ಕನ್ನಡಿಗರದ್ದು. ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯಾ...' ಎಂಬ ಹಾಡನ್ನು ಹಿನ್ನೆಲೆಯಲ್ಲಿ ಹಚ್ಚಿಕೊಳ್ಳಬಹುದು. ■

